ಮೂಲದಾವಾ ನಂಃ 29/2022

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **04-04-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ನನ್ನ ತಾಯಿ ಮೃತರಾದ ನಂತರ ವಂಶವೃಕ್ಷವನ್ನು ಪಡೆಯಲು ಅದಕ್ಕೆ ಸಂಬಂಧಪಟ್ಟಂತಹ ಪ್ರಮಾಣ ಪತ್ರವನ್ನು ಯಾರು ತಯಾರಿಸಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮೃತರಾದ ನಂತರ ವಾರಸಾ ಮಾಡಲು ಯಾರು ಅರ್ಜಿಯನ್ನು ನೀಡಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮೃತರಾದ ನಂತರ ಆದಂತಹ ವಾರಸಾ ಪ್ರಕಾರವೇ ನನ್ನ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ ನನ್ನ ಅಜ್ಜಿಯ ವಾರಸಾನಾತೆಯಿಂದ ನನ್ನ ಹೆಸರು ದಾಖಲಾಗಿದೆ ಎಂದು ಸಾಕ್ಷಿ ನುಡಿದಿದ್ದಾರೆ. ನಾನು ಅದಕ್ಕೆ ಸಂಬಂಧಪಟ್ಟಂತಹ ದಾಖಲೆಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರಿದು ಅದರ ಕುರಿತಾಗಿ ಆರ್.ಟಿ.ಸಿ. ಒಂದೇ ಹಾಜರುಪಡಿಸಿದ್ದೇನೆ ಎಂಬುದಾಗಿ ನುಡಿದಿದ್ದಾರೆ.

ನನ್ನ ತಾಯಿ ಮೃತರಾದ ನಂತರ ನಾನೊಬ್ಬಳೇ ಅವರ ವಾರಸುದಾರ ಎಂಬುದಾಗಿ ಸುಳ್ಳು ಪ್ರಮಾಣ ಪತ್ರವನ್ನು ದಾಖಲಿಸಿ ವಾರಸಾ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಇಬ್ಬರು ಸಹೋದರರು ವಿದೇಶದಲ್ಲಿದ್ದರೂ ಸಹ ಸದ್ರಿ ವಿಷಯವನ್ನು ಮುಚ್ಚಿಟ್ಟು ಸುಳ್ಳು ಪ್ರಮಾಣ ಪತ್ರವನ್ನು ತಯಾರಿಸಿ ವಾರಸಾ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ವಾದಿಯರು ಸಹ ನನ್ನ ತಾಯಿಯ ವಾರಸುದಾರರು ಎಂದರೆ ಸರಿಯಲ್ಲ.

ದಿನಾಂಕಃ 25.09.2018 ರಂದು ನಾನು ಹಾಗೂ 1 ರಿಂದ 7 ನೇ ಪ್ರತಿವಾದಿಯರೆಲ್ಲರೂ ಕೂಡಿಕೊಂಡು ತೋಂಡಿ ವಾಂಟಣಿಯನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದ್ರಿ ತೋಂಡಿ ವಾಂಟಣಿಯನ್ನು ಬರವಣಿಗೆ ಮಾಡಲಾಗಿತ್ತು ಎಂದರೆ ಸರಿ. ಸದ್ರಿ ತೋಂಡಿ ವಾಂಟಣಿಯ ಪ್ರತಿ ನನ್ನ ಹತ್ತಿರವಿದ್ದು ಅದನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸದ್ರಿ ತೋಂಡಿ ವಾಂಟಣಿಯ ಪ್ರತಿಯನ್ನು ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಲಾಗಿದೆ. ಆ ಸಂದರ್ಭದಲ್ಲಿ ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಅದಕ್ಕೆ ಸಂಬಂಧಪಟ್ಟಂತಹ ಸ್ಟಾಂಪ್ ಶುಲ್ಕವನ್ನು ಎಲ್ಲರೂ ಸೇರಿ ನಿಭಾಯಿಸಿದ್ದೇವೆ. ಸದ್ರಿ ಸ್ಟಾಂಪ್ ಶುಲ್ಕವನ್ನು ಪಾವತಿಸಿದ ರಸೀದಿಯು ನನ್ನ ಹತ್ತಿರ ಇರುವುದಿಲ್ಲ, ಆದರೆ ಯಾರ ಕಡೆ ಇದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ದಿನಾಂಕಃ 25.09.2018 ರಂದು ವಾದಿಯರು ವಿದೇಶದಲ್ಲಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ವಾದಿಯರು ಎಲ್ಲಿದ್ದರು ಎಂಬ ಬಗ್ಗೆ ಚೌಕಾಸಿ ಮಾಡುವ ಅವಶ್ಯಕತೆ ಇದ್ದಿರಲಿಲ್ಲ. ನಾವು ತೋಂಡಿ ವಾಂಟಣಿಯನ್ನು ಕಂದಾಯ ಇಲಾಖೆಯಯವರಿಗೆ ಪತ್ರಿಕೆಯ ಮೂಲಕ ಮಾಹಿತಿ ಕೊಟ್ಟಿದ್ದು ಅದನ್ನು ಉದ್ದೇಶಪೂರ್ವಕವಾಗಿ ನೋಂದಣಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ತೋಂಡಿ ವಾಂಟಣಿಯ ಅನುಸಾರವಾಗಿ ಅವರವರ ಹಿಸ್ಸೆಗೆ ಪ್ರತ್ಯೇಕ ಪೋಡಿಯಾಗಿ ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸರಿ. ಸದ್ರಿ ತೋಂಡಿ ವಾಂಟಣಿಯನುಸಾರವಾಗಿ ನನಗೆ 01-01-10 ಸ್ಥಳ ಬಂದಿದೆ. ನಾನು ತದನಂತರ ಸದ್ರಿ ಸ್ಥಳವನ್ನು ದಿನಾಂಕಃ 15.12.2021 ರಂದು 9 ನೇ ಪ್ರತಿವಾದಿಗೆ ರೂ.2,90,000/- ಪ್ರತಿಫಲಕ್ಕೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸದ್ರಿ ಪ್ರತಿಫಲದ ಹಣವನ್ನು ನಗದು ರೂಪದಲ್ಲಿ ಪಡೆದಿದ್ದೇನೆ. ಸದ್ರಿ ಪ್ರತಿಫಲದ ಹಣವನ್ನು ನಾನೊಬ್ಬಳೇ ಉಪಯೋಗಿಸಿಕೊಂಡಿದ್ದೇನೆ.ನಾನು ಉದ್ದೇಶಪೂರ್ವಕವಾಗಿ ವಾದಿಯ ಬೆನ್ನ ಹಿಂದೆ ದಾಖಲೆಗಳನ್ನು ಸೃಷ್ಟಿಸಿಕೊಂಡು

ತದನಂತರ ನನಗೆ ಬಂದಂತಹ ಸ್ಥಳವನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಸ್ಥಳವನ್ನು ಪಾಲು ಮಾಡಿಕೊಳ್ಳಲು ಹಾಗೂ ಅದನ್ನು ಮಾರಾಟ ಮಾಡಲು ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

ನನಗೆ 3 ಜನ ಮಕ್ಕಳು. ನನ್ನ ಇಬ್ಬರು ಮಕ್ಕಳ ಮದುವೆಯಾಗಿದೆ. ನನ್ನ 2 ನೇ ಮಗಳ ಮದುವೆಯು ಆಗಸ್ಟ್-2024 ನೇ ಸಾಲಿನಲ್ಲಿ ಆಗಿದೆ. ನಾನು ಸದ್ರಿ ಮದುವೆಗೆ ಇಬ್ಬರು ವಾದಿಯರನ್ನು ಕರೆದಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ಮದುವೆಯಲ್ಲಿ ಇಬ್ಬರು ವಾದಿಯರು ಹಾಜರಿದ್ದರು ಎಂದರೆ ಸರಿಯಲ್ಲ. ವಾದಿಯರು ನನ್ನ ಒಡಹುಟ್ಟಿದ ಸಹೋದರರು ಎಂದರೆ ಸರಿಯಲ್ಲ.

ವಾದಿಯರಿಗೆ ದಾವಾ ಸ್ಥಳದಲ್ಲಿ ಹಕ್ಕಿದ್ದರೂ ಸಹ ಅದನ್ನು ತಪ್ಪಿಸಲು ಉದ್ದೇಶಪೂರ್ವಕವಾಗಿ ತೋಂಡಿ ವಾಂಟಣಿಯನ್ನು ನಮ್ಮ ನಮ್ಮ ನಡುವೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ಥಳಗಳಲ್ಲಿ ಈಗಲೂ ಸಹ ವಾದಿಯರಿಗೆ 2/5 ಅಂಶ ಹಕ್ಕಿದೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಬೇರೆ ಯಾರನ್ನೂ ಸಾಕ್ಷಿದಾರರನ್ನಾಗಿ ಮಾಡುವುದು ಬಾಕಿ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಹೊನ್ನಾವರ.